**ದಿನಾಂಕಃ 15.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿಯ ಪರ ಶ್ರೀ ಕೆ.ಜಿ.ಪಿ. ವಕೀಲರಿಂದಃ**

1. ವಾದಿ ಮತ್ತು ನಾನು ಇಬ್ಬರೂ ಸೋಗಿ ಗ್ರಾಮದ ವಾಸಿಗಳು ಎಂದರೆ ಸರಿ. ವಾದಿಯು ಬಹಳ ವರ್ಷಗಳಿಂದ ನಮ್ಮ ಮನೆಗೆ ಬಂದು ಕೆಲಸ ಮಾಡುವುದು ಮಾಡುತ್ತಿದ್ದರು ಎಂದರೆ ಸುಳ್ಳು. ವಾದಿಯು ನನಗೆ ಸ್ನೇಹಿತಳು ಮತ್ತು ಆತ್ಮೀಯಳಾಗಿದ್ದರೂ ಆಕೆಯ ಪರಿಚಯವಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ವಾದಿಯು ನನ್ನ ಚಿಕ್ಕಂದಿನಲ್ಲಿ ನನಗೆ ಸ್ನೇಹಿತೆಯಾಗಿದ್ದಳು. ಸರ್ವೇ ನಂ.185/ಸಿ ಯಲ್ಲಿನ 8 ಎಕರೆ ನನಗೆ ಹೇಗೆ ಬಂದಿತ್ತು? ಎಂದರೆ ನನ್ನ ಗಂಡ ಖರೀದಿ ಮಾಡಿದ್ದರು. ನನ್ನ ಗಂಡ ಅದನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಿದ್ದರು. ಆ ಕ್ರಯ ಪತ್ರವನ್ನು ಕೋರ್ಟಿಗೆ ಹಾಜರು ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ನಾನು ಆ ಕ್ರಯ ಪತ್ರವನ್ನು ಕೋರ್ಟಿಗೆ ಹಾಜರು ಮಾಡಿಲ್ಲ ? ಎಂದರೆ ಸಾಕ್ಷಿಯು ಆ ಕ್ರಯ ಪತ್ರ ಮನೆಯಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲವೆಂದು ಹೇಳಿದ್ದಾರೆ. ಆ ಕ್ರಯ ಪತ್ರದಲ್ಲಿ ದಾವಾ ಸ್ವತ್ತಿನ ಚೆಕ್ಕುಬಂದಿಯನ್ನು ಏನೆಂದು ಬರೆಯಿಸಿದ್ದೇನೆಂದು ನನಗೆ ಗೊತ್ತಿದೆಯೇ? ಎಂದರೆ ಅದನ್ನೆಲ್ಲಾ ನನ್ನ ಗಂಡನೇ ನೋಡಿಕೊಳ್ಳುತ್ತಿದ್ದರು. ಆ ಕ್ರಯ ಪತ್ರದಲ್ಲಿ ಏನು ಚೆಕ್ಕುಬಂದಿ ಬರೆದಿದೆ ಎಂದು ಹೇಳಲು ಆಗುತ್ತದೆಯೇ? ಎಂದರೆ ಅದೆಲ್ಲಾ ನನ್ನ ಗಂಡನಿಗೆ ಗೊತ್ತಿರುತ್ತದೆ.

2. ನಾನು ಪ್ರತಿವಾದ ಪತ್ರದಲ್ಲಿ ದಾವಾ ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆಂದು ಹೇಳಿದ್ದು, 2 ನೇ ಪ್ರತಿವಾದಿಯ ಕ್ರಯ ಪತ್ರದಲ್ಲಿ ಯಾವ ಚೆಕ್ಕುಬಂದಿ ಬರೆಯಿಸಿದ್ದೇನೆ ಎಂದರೆ ಅದನ್ನು ನನ್ನ ಅಳಿಯ ಜಯಕುಮಾರ್ ಬರೆಯಿಸಿದ್ದರು. ನನ್ನ ಕ್ರಯ ಪತ್ರದಲ್ಲಿ ಬೇರೆ ಚೆಕ್ಕುಬಂದಿ ಮತ್ತು2 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ಬೇರೆ ಚೆಕ್ಕುಬಂದಿ ಇರುವುದರಿಂದಲೇ ನನ್ನ ಕ್ರಯ ಪತ್ರವನ್ನು ಕೋರ್ಟಿಗೆ ಹಾಜರು ಮಾಡಿಲ್ಲ ಎಂದರೆ ಉತ್ತರಿಸಿಲ್ಲ. ನಾನು ಹೇಳುತ್ತೇನೆ, ಅದನ್ನು ನನ್ನ ಅಳಿಯ ನಮೂದು ಮಾಡಿದ್ದಾನೆ. 2 ನೇ ಪ್ರತಿವಾದಿಯ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ಸುಳ್ಳು ಚೆಕ್ಕುಬಂದಿ ಇರುತ್ತದೆ ಎಂದರೆ ಉತ್ತರಿಸಿಲ್ಲ. ವಾದಿ ನನಗೆ ನೋಟೀಸ್ ನೀಡಿದ್ದು ಅದು ನನಗೆ ತಲುಪಿತ್ತು ಎಂದರೆ ಸರಿಯಲ್ಲ. ನಾನು ನನ್ನ ವಕೀಲರ ಮೂಲಕ ಆ ನೋಟೀಸಿಗೆ ರಿಪ್ಲೆ ಕೊಟ್ಟಿದ್ದೇನೆ ಎಂದರೆ ಕೊಟ್ಟಿಲ್ಲ. ನೋಟೀಸ್ ಪಡೆದು ಅದಕ್ಕೆ ಉತ್ತರ ಕೂಡಾ ನೀಡಿದ್ದರೂ ಈಗ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ರಿಪ್ಲೆ ನೋಟೀಸ್ ನಿಪಿ 8 ರಲ್ಲಿ ವಾದಿ ತನ್ನ ನೋಟೀಸಿನಲ್ಲಿ ಹೇಳಿರುವ ದಾವಾ ಸ್ವತ್ತಿನ ಚೆಕ್ಕುಬಂದಿ ಸರಿ ಇಲ್ಲವೆಂದು ನಾನು ತಿಳಿಸಿದ್ದುಂಟೇ? ಎಂದರೆ ತಿಳಿಸಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿಯಾದರೂ ದಾವಾ ಸ್ವತ್ತಿನ ಚೆಕ್ಕುಬಂದಿ ಸರಿ ಇಲ್ಲವೆಂದು ನಾನು ತಿಳಿದ್ದುಂಟೇ ಎಂದರೆ ನನಗೆ ಚೆಕ್ಕುಬಂದಿ ಎಂದರೆ ಗೊತ್ತಾಗುವುದಿಲ್ಲ.

3. ನಾನು 2 ನೇ ಪ್ರತಿವಾದಿಗೆ ನನ್ನ ಮೊಮ್ಮಗಳನ್ನು ಮದುವೆ ಮಾಡಿ ಕೊಟ್ಟಿದ್ದೇನೆ. ನನ್ನ ಮೊಮ್ಮಗಳನ್ನು 2 ನೇ ಪ್ರತಿವಾದಿಗೆ ಮದುವೆ ಮಾಡಿದ್ದಾಗಿನಿಂದ ನಾನು ಅವರ ಮನೆಯಲ್ಲೇ ವಾಸ ಮಾಡುತ್ತಿದ್ದೇನೆ ಎಂದರೆ ಇಲ್ಲ, ನಾನು ನನ್ನ ಮಗನ ಮನೆ ಮತ್ತು 2 ನೇ ಪ್ರತಿವಾದಿಯ ಮನೆಗಳಿಗೆ ಆಗಾಗ ಹೋಗಿ ಸ್ವಲ್ಪ ಕಾಲ ಇದ್ದು ಬರುತ್ತೇನೆ. ಈ ದಿನ ನನ್ನನ್ನು 2 ನೇ ಪ್ರತಿವಾದಿ ಶಿರಹಟ್ಟಿಯಿಂದ ಕಾರಿನಲ್ಲಿ ಕೋರ್ಟಿಗೆ ಕರೆ ತಂದಿದ್ದಾರೆ ಎಂದರೆ ಸಾಕ್ಷಿಯು ನಾನು ಬಳ್ಳಾರಿಯಿಂದ ಬಾಡಿಗೆ ಕಾರಿನಲ್ಲಿ ಬಂದಿದ್ದೇನೆ ಎಂದು ಹೇಳಿದ್ದಾರೆ. ನಾನು ಮತ್ತು ನನ್ನ ಮಕ್ಕಳು ದಿನಾಂಕ 18.10.2011 ರಂದು

ನೋಂದಾಯಿತ ಪಾಲುವಿಭಾಗ ಪತ್ರದ ಪ್ರಕಾರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ನೋಂದಾಯಿತ ಪಾಲು ವಿಭಾಗ ಪತ್ರದಲ್ಲಿ ನಾವು ಸರ್ವೇ ನಂ. 185/ಸಿ ಜಮೀನನ್ನು ಸೇರಿಸಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಅದನ್ನು ಪಾಲುವಿಭಾಗ ಪತ್ರದಲ್ಲಿ ಸೇರಿಸಿಲ್ಲ ? ಎಂದರೆ ನನ್ನ ಜೀವನಾಂಶಕ್ಕಾಗಿ ಬೇಕಿತ್ತಲ್ಲ, ಅದಕ್ಕೇ ಸೇರಿಸಿಲ್ಲ. ಪಾಲುವಿಭಾಗ ಪತ್ರದಲ್ಲಿ ಸರ್ವೇ ನಂ. 185/ಸಿ ಜಮೀನನ್ನು ನನ್ನ ಜೀವನಾಂಶಕ್ಕಾಗಿ ತೆಗೆದಿಟ್ಟಿದ್ದೇವೆ ಎಂದು ಬರೆದಿದೆಯೇ? ಎಂದರೆ ಬರೆದಿಲ್ಲ. ನಾನು ಮತ್ತು ನನ್ನ ಮಕ್ಕಳು ಪಾಲುವಿಭಾಗ ಮಾಡಿಕೊಳ್ಳುವ ಮುಂಚೆಯೇ ದಾವಾ ಸ್ವತ್ತನ್ನು ವಾದಿಗೆ ಕ್ರಯ ಮಾಡಲು ಒಪ್ಪಿ ವಾದಿಯಿಂದ ಮುಂಗಡ ಹಣ ಪಡೆದಿದ್ದ ಕಾರಣದಿಂದಲೇ ನಾವು ಪಾಲುವಿಭಾಗ ಪತ್ರದಲ್ಲಿ ದಾವಾ ಸ್ವತ್ತನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ ನಾನು ವಾದಿಯಿಂದ ರೂ. 5 ಲಕ್ಷ ಮುಂಗಡ ಪಡೆದು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುವ ವಿಚಾರ ಸತ್ಯವಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದಲೇ ದಿನಾಂಕ 21.05.2016 ರಂದು ನಾನು ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸುಳ್ಳು ಸಾಕ್ಷಿ ಸೃಷ್ಟಿ ಮಾಡಿದ್ದಾರೆ . ಕ್ರಯದ ಕರಾರಿನಲ್ಲಿ ಬಾಕಿ ಹಣ ರೂ. 50 ಸಾವಿರ ಪಡೆದುಕೊಂಡು ವಾದಿಗೆ ಕ್ರಯ ಪತ್ರ ನೋಂದಣಿ ಮಾಡಿ ಕೊಡುತ್ತೇನೆಂದು ಒಪ್ಪಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರಿನಲ್ಲಿ ಬರೆದಿರುವ ಚೆಕ್ಕುಬಂದಿಯೇ ದಾವಾ ಸ್ವತ್ತಿನ ಸರಿಯಾದ ಚೆಕ್ಕುಬಂದಿ ಎಂದರೆ ಸುಳ್ಳು ಸಾಕ್ಷಿ ಹೇಳುತ್ತಿದ್ದಾರೆ. ಕ್ರಯದ ಕರಾರಿನಲ್ಲಿ ನಾನು ಕೆ.ಎಂ. ಕಾಳಮ್ಮ ಎಂದು ಸಹಿ ಮಾಡಿದ್ದೇನೆ ಎಂದರೆ ಅವರೇ ಮಾಡಿಕೊಂಡಿದ್ದಾರೆ. ಈಶಪ್ಪ ಎನ್ನುವವರು ಕ್ರಯದ ಕರಾರಿನ ಬಿಕ್ಕಲಂದಾರರಾಗಿ ಟೈಪ್ ಮಾಡಿದ್ದಾರೆ ಎಂದರೆ ವಾದಿಯೇ ಮಾಡಿಕೊಂಡಿದ್ದಾರೆ. ನಾನು ಕ್ರಯದ ಮುಂಗಡ ರೂ. 5 ಲಕ್ಷ ಪಡೆದು ಕ್ರಯದ ಕರಾರು ಬರೆದು ಕೊಡುವಾಗ ಮಂಜುನಾಥ, ಕೊಟ್ರಪ್ಪ ಮತ್ತು ದಂಡೆಪ್ಪ ಸಾಕ್ಷಿಗಳಾಗಿ ಸಹಿಗಳನ್ನು ಮಾಡಿದ್ದಾರೆ ಎಂದರೆ ಸುಳ್ಳು ಸಹಿ ಮಾಡಿದ್ದಾರೆ. ನಾನು ಕ್ರಯದ ಮುಂಗಡ ಪಡೆದು ದಾವಾ ಸ್ವತ್ತನ್ನು ವಾದಿಗೆ ಕ್ರಯ ಮಾಡಲು ಒಪ್ಪಿ ಕರಾರು ಬರೆದು ಕೊಟ್ಟಿರುವುದು ನಿಜವಿದ್ದರೂ ಈಗ 2 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದಲ್ಲಿ ಇರುವ ನನ್ನ ಸಹಿ ಮತ್ತು ರಿಪ್ಲೆ ನೋಟೀಸ್, ನನ್ನ ವಕಾಲತ್ತು, ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ನನ್ನ ಸಹಿಗಳು ಎಲ್ಲವೂ ನನ್ನವೇ ಸಹಿಗಳು ಎಂದರೆ ಸರಿಯಲ್ಲ ನಾನು ಕೆ ಎಂ ಕಾಳಮ್ಮ ಎಂದು ಮುಖ್ಯವಿಚಾರಣೆಯಲ್ಲಿ ಕೆ ಮತ್ತು ಎಂ ಇನಿಷಿಯಲ್ ಗಳ ನಡುವೆ ಪೂರ್ಣವಿರಾಮ ಹಾಕದೇ ಸಹಿ ಮಾಡಿರುವ ಪ್ರಕಾರವೇ ಕ್ರಯದ ಕರಾರಿನಲ್ಲೂ ಸಹಿ ಮಾಡಿದ್ದೇನೆ ಎಂದರೆ ಸುಳ್ಳು ಸಾಕ್ಷಿ ಹೇಳುತ್ತಿದ್ದಾರೆ . 2 ನೇ ಪ್ರತಿವಾದಿ ನನಗೆ ಹೇಳಿಕೊಟ್ಟ ಪ್ರಕಾರ ಕ್ರಯದ ಕರಾರಿನಲ್ಲಿರುವ ಸಹಿ ನನ್ನದಲ್ಲವೆಂದು ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಆಸ್ತಿ ಖರೀದಿ ಮಾಡಿದ ಕ್ರಯ ಪತ್ರವನ್ನು ಕೋರ್ಟಿಗೆ ಹಾಜರು ಮಾಡಲು ನನಗೆ ತೊಂದರೆ ಇದೆಯೇ? ಎಂದರೆ ನಾನು ಆ ಕ್ರಯ ಪತ್ರವನ್ನು ನೋಡೇ ಇಲ್ಲ, ನನ್ನ ಗಂಡನ ಬಳಿಯೇ ಇದ್ದವು. 2 ನೇ ಪ್ರತಿವಾದಿಯ ಕ್ರಯ ಪತ್ರಕ್ಕೆ ಸಾಕ್ಷಿಗಳಾಗಿ ಸಹಿ ಮಾಡಿದವರು ಗದಗ ಜಿಲ್ಲೆಯವರು ಎಂದರೆ ನಾನು ಪತ್ರ ಮಾಡಿಕೊಡಲು ಮತ್ತು ಸಾಕ್ಷಿ ಮಾಡಲು ಹೋಗಿಲ್ಲ . ನಾನು ವಾದಿಗೆ ಕ್ರಯದ ಕರಾರು ಬರೆದುಕೊಟ್ಟ ಬಗ್ಗೆ 2 ನೇ ಪ್ರತಿವಾದಿಗೆ ಗೊತ್ತಾದ ನಂತರ ದಾವಾ ಸ್ವತ್ತನ್ನು ಕಬಳಿಸಲು ಮತ್ತು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಆತ ನನ್ನನ್ನು ಆತನ ಮನೆಯಲ್ಲೇ ಇಟ್ಟುಕೊಂಡು ಅನುಚಿತ ಪ್ರಭಾವ ಬೀರಿ ಕ್ರಯ ಪತ್ರ ಮಾಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆ ಕ್ರಯ ಪತ್ರದಲ್ಲಿ ಸುಳ್ಳು ಚೆಕ್ಕುಬಂದಿ ನಮೂದು ಮಾಡಿಕೊಂಡು ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗನ ಹೆಸರು ವಾಗೀಶ ಎಂದರೆ ಸರಿ. ನನ್ನ ಮಗ ವಾಗೀಶ 2 ನೇ ಪ್ರತಿವಾದಿಯ ವಿರುದ್ಧ ತಹಶೀಲ್ದಾರರಿಗೆ ತಕರಾರು ಸಲ್ಲಿಸಿ ಆತನ ಹೆಸರಿಗೆ ಖಾತೆ ಮಾಡಬಾರದೆಂದು ತಿಳಿಸಿದ್ದ ಬಗ್ಗೆ ನನಗೆ

ಗೊತ್ತಿದೆ ಎಂದರೆ ಗೊತ್ತಿಲ್ಲ. ವಾದಿಯಿಂದ ರೂ. 5 ಲಕ್ಷ ಮುಂಗಡ ಪಡೆದು ಕ್ರಯದ ಕರಾರು ಬರೆದುಕೊಟ್ಟಿರುವ ಕಾರಣ ಬಾಕಿ ರೂ. 50 ಸಾವಿರ ಮೊತ್ತವನ್ನು ಪಡೆದುಕೊಂಡು ವಾದಿಗೆ ಕ್ರಯ ಪತ್ರ ಬರೆದುಕೊಡಲು ನಾನು ಬಾಧ್ಯಸ್ಥಳಿದ್ದೇನೆ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರ ಮಾಡಿಕೊಡಲು ಸಿದ್ದಳಿದ್ದರೂ 2 ನೇ ಪ್ರತಿವಾದಿ ಅದಕ್ಕೆ ಅಡ್ಡಿಪಡಿಸುತ್ತಿದ್ದಾನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮಾತು ಕೇಳಿ ವಾದಿಯ ಕರಾರು ಪತ್ರ ಸತ್ಯವಾಗಿದ್ದರೂ ಇಲ್ಲವೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 8 ಎಕರೆ ಜಮೀನಿಗೆ ರೂ. 4 ಲಕ್ಷ ಬೆಲೆ ತೋರಿಸಿ ಜಮೀನಿನ ಕಡಿಮೆ ಮಾರುಕಟ್ಟೆ ಮೌಲ್ಯ ತೋರಿಸಿ ಸುಳ್ಳು ಕ್ರಯ ಪತ್ರ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**